ಒ.ಎಸ್. ನಂ.21/2018
ಪಿಡಬ್ಲು-1

ದಿನಾಂಕ 09.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ಸಾಕ್ಷಿಗೆ ಪ್ರತಿವಾದಿ ಪರ ವಕೀಲರು ಚುನಾವಣಾ ಗುರುತಿನ ಚೀಟಿಯನ್ನು ತೋರಿಸಲಾಗಿ ಸಾಕ್ಷಿ ಮಲ್ಲಿನಾಥ ತಂದೆ ಹೊನ್ನಪ್ಪ ಎಂದು ಹೆಸರು ಇದ್ದು ಭಾವಚಿತ್ರವನ್ನು ನೋಡಿ ಗುರುತಿಸಿರುವುದಿಲ್ಲ. ಸಾಕ್ಷಿಗೆ ಪ್ರತಿವಾದಿ ಪರ ವಕೀಲರು ಆಧಾರ ಕಾರ್ಡನ್ನು ತೋರಿಸಲಾಗಿ ನಿಂಗಪ್ಪ ತಂದೆ ಹೊನ್ನಪ್ಪ ಎಂದು ಇದ್ದು ಭಾವಚಿತ್ರವನ್ನು ನೋಡಿ ಗುರುತಿಸಿರುವುದಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದಿರುವ 7 ನೆ ಪ್ರತಿವಾದಿಯನ್ನು ನೋಡಿ ಗುರುತಿಸಿದ್ದು ಅವರ ಹೆಸರು ನಿಂಗಪ್ಪ ತಂದೆ ಹೊನ್ನಪ್ಪ ಇದ್ದು ಸಾಕ್ಷಿ ಅವರು 2 ನೆ ಹೆಂಡತಿ ಮಗನಿರುತ್ತಾನೆ ಎಂದು ನುಡಿಯುತ್ತಾರೆ. 7 ನೆ ಪ್ರತಿವಾದಿ 2 ನೆ ಹೆಂಡತಿಯ ಮಗನೆಂದು ಯಾವುದೆ ದಾಖಲೆ ನೋಡಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಪ್ರತಿವಾದಿ ಪರ ವಕೀಲರು 5 ನೆ ಪ್ರತಿವಾದಿಯ ಚುನಾವಣಾ ಗುರುತಿನ ಚೀಟಿಯನ್ನು ತೋರಿಸಲಾಗಿ ಸಾಕ್ಷಿ ಮಲ್ಲಮ್ಮ ಎಂದು ಹೆಸರು ಇದ್ದು ಭಾವಚಿತ್ರವನ್ನು ನೋಡಿ ಗುರುತಿಸಿರುವುದಿಲ್ಲ. ಸಾಕ್ಷಿ ಸದರಿ ಮಲ್ಲಮ್ಮ ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಪ್ರತಿವಾದಿ ಪರ ವಕೀಲರು 8 ನೆ ಪ್ರತಿವಾದಿಯ ಚುನಾವಣಾ ಗುರುತಿನ ಚೀಟಿ ಆಧಾರ ಕಾರ್ಡಗಳನ್ನು ತೋರಿಸಲಾಗಿ ಸಾಕ್ಷಿ ಬಸಮ್ಮ ಎಂದು ಹೆಸರು ಇದ್ದು ಭಾವಚಿತ್ರಗಳನ್ನು ನೋಡಿ ಗುರುತಿಸಿರುವುದಿಲ್ಲ.

4 ರಿಂದ 11 ನೆ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರ ಸಲ್ಲಿಸಿದ ನಂತರ ಅವರ ಬಗ್ಗೆ ತಿಳಿದುಕೊಳ್ಳಲು ನಾನು ಪ್ರಯತ್ನ ಮಾಡಿಲ್ಲ ಮತ್ತು ಸದರಿಯವರ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿಲ್ಲ. ನಮಗೆ ದಾವಾಸ್ತಿಗಳಲ್ಲಿ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ದಾವೆ ಸಲ್ಲಿಸುವ ಸಮಯದಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನೋಡಿಲ್ಲ. ನನ್ನ ತಂದೆಯ ವಿರುದ್ದ ಪಾಲು ವಾಟ್ನಿ ಬಗ್ಗೆ ದಾವೆ ಸಲ್ಲಿಸಿರುತ್ತೇನೆ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ